ದಿನಾಂಕಃ **29.03.2021** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.

ಮುಂದುವರೆದ ಪಾಟೀಸವಾಲುಃ ಪ್ರತಿವಾದಿಯ ಪರ ವಕೀಲರಿಂದಃ

**5.** ನನಗೆ ಕನ್ನಡ ಓದಲು ಬರೆಯಲು ಬರುತ್ತದೆ. ಸರ್ವೆ ನಂಃ **23/1** ಹಾಗೂ **23/2** ರ ಜಮೀನುಗಳು ಒಂದೇ ಚಕ್ಕುಬಂಧಿಗಳಲ್ಲಿ ಬರುತ್ತವೆ ಎಂದರೆ ಸರಿ. ನಾನು ಸ್ವಾಧೀನದಲ್ಲಿ ಇದ್ದೇನೆ ಎಂದು ತೋರಿಸಲು ನನಗೆ ಚಕ್ಕುಬಂಧಿ ಗೊತ್ತಿದೆ. ಸರ್ವೆ ನಂಃ **23/3** ರ ಪೂರ್ವಕ್ಕೆಃ ಹಳೇಬೀಡು ಗಡಿ ಹಾಗೂ ಕಾವಲು, ಪಶ್ಚಿಮಕ್ಕೆಃ ಲಾಹೋರ್ ಜಮೀನು, ಉತ್ತರಕ್ಕೆಃ ನಮ್ಮದೇ ಜಮೀನು, ದಕ್ಷಿಣಕ್ಕೆಃ ಹಳೇಬೀಡು ಗಡಿ ಹಾಗೂ ಕಾವಲು ಇರುತ್ತದೆ. ಸರ್ವೆ ನಂಃ **22/3** ರ ಜಮೀನು ಈ ಮೇಲೆ ಹೇಳಿದ ಚಕ್ಕುಬಂಧಿಯಲ್ಲಿ ಬರುತ್ತದೆ ಎಂದು ನನ್ನ ವಾದಪತ್ರದಲ್ಲಿ ನಮೂದಿಸಿದ್ದೇನೆ . ಇದನ್ನು ವಾದಪತ್ರದಲ್ಲಿ ನಮೂದಿಸದೆ ಇದ್ದರೆ ನನ್ನ ವಾದಪತ್ರ ಸುಳ್ಳು ಎಂದರೆ ಸರಿಯಲ್ಲ . ಸರ್ವೆ ನಂಃ **23/1** ರಲ್ಲಿ **3** ಎಕರೆ **15** ಗುಂಟೆ ಜಮೀನು ಇರುತ್ತದೆ. ದಾಖಲೆಗಳನ್ನು ನೋಡಿದ್ದೇನೆ. ಸದರಿ ಸರ್ವೆ ನಂಬರಿನ ಜಮೀನು ಷೇಕ್ ದಾವೂದ್ ರವರ ಹೆಸರಿನಲ್ಲಿ ಇದೆ. ಒಂದು ಆರ್ ಟಿ ಸಿ ಯನ್ನು ಸಾಕ್ಷಿಗೆ ತೋರಿಸಲಾಗಿ ಅದು ಷೇಕ್ ದಾವೂದ್ ರವರ ಹೆಸರಿನಲ್ಲಿರುವ **3** ಎಕರೆ **6** ಗುಂಟೆ ಜಮೀನು ಎಂದು ಸಾಕ್ಷಿ ನೋಡಿ ಗುರುತಿಸಿದ್ದಾರೆ, ಅದನ್ನು ನಿಡಿ.**1** ಎಂದು ಗುರುತಿಸಲಾಯಿತು. ಐ ಸಿ ಆರ್ **12/76-77** ರಂತೆ ಅವರಿಗೆ ಖಾತೆ ಬಂದಿರುವುದು ಎಂದರೆ ಸಾಕ್ಷಿ ಖಾತೆ ಅವರು ಕೂರಿಸಿಕೊಂಡಿದ್ದಾರೆ ಎನ್ನುತ್ತಾರೆ.

**6.** ಅಕ್ರಮವಾಗಿ ಖಾತೆ ಮಾಡಿಕೊಂಡಿದ್ದಾರೆ ಎಂದು ನಾವು ಅದನ್ನು ಪ್ರಶ್ನಿಸಿ ಮೇಲ್ಮನವಿ ಸಲ್ಲಿಸಿಲ್ಲ. ನನ್ನ ದೊಡ್ಡಪ್ಪ ಷೇಕ್ ದಾವೂದ್ ಸಾಬ್ ರವರಿಂದ ನನಗೆ ಬೆದರಿಕೆ ಇತ್ತು. ಯಾವ ದಿನಾಂಕದಿಂದ ನಿಮಗೆ ಬೆದರಿಕೆ ಹಾಕಿದ್ದರು ಎಂದರೆ ಸಾಕ್ಷಿ ನನ್ನ

ತಂದೆಯವರು ಇದ್ದಾಗ ಬೆದರಿಕೆ ಹಾಕಿದ್ದಾರೆ, ನಮಗೂ ಹಾಕಿದ್ದಾರೆ ಎನ್ನುತ್ತಾರೆ. ಖಾತೆ ಮಾಡಲು ಗ್ರಾಮಲೆಕ್ಕಿಗರು ಇಂತಹವರು ಇಂತಹ ಜಮೀನಿನಲ್ಲಿ ಸ್ವಾಧೀನದಲ್ಲಿ ಇದ್ದಾರೆಂದು ಸ್ಥಳ ಪರಿಶೀಲನೆ ಮಾಡಿ ವರದಿ ಹಾಕಬೇಕು ಎಂದರೆ ಸರಿ. ಆ ರೀತಿ ಸ್ಥಳ ಪರಿಶೀಲನೆ ಮಾಡಿ ವರದಿ ಹಾಕಿದ ನಂತರ ಷೇಕ್ ದಾವೂದ್ ಸಾಬ್ ರವರ ಹೆಸರಿನಲ್ಲಿ ಸದರಿ ಖಾತೆ ಆಗಿರುವುದು ಎಂಬುವುದು ನನಗೆ ಗೊತ್ತಿಲ್ಲ. ದಾವಾ ಐಟಂ ನಂಃ 1 ಸದರಿ ಷೇಕ್ ದಾವೂದ್ ಸಾಬ್ ರವರ ಸ್ವಯಾರ್ಜಿತ ಆಸ್ತಿ ಎಂದರೆ ಸರಿಯಲ್ಲ.

7. ಅಬ್ದುಲ್ ಖಾದರ್ ರವರಿಗೆ ನೂರ್ ಜಾನ್ ಬೇಗಂ ಎಂಬ ಮಗಳು ಇದ್ದರು ಎಂದರೆ ಸರಿ. ಅವರ ಗಂಡನ ಹೆಸರು ಇಮಾಮ್ ಸಾಬ್ ಎಂದರೆ ಸರಿ. ಅವರ ಮಗನ ಹೆಸರು ಮಹಮ್ಮದ್ ರಿಜ್ವಾನ್ ಎಂದರೆ ಸರಿ. ಇವರೆಲ್ಲ ಜೀವಂತವಾಗಿದ್ದಾರೆ ಎಂದರೆ ಸರಿ. ಅವರನ್ನು ಈ ದಾವೆಯಲ್ಲಿ ಸೇರಿಸಿಲ್ಲ ಎಂದರೆ ಸರಿ. ಸರ್ವೆ ನಂಃ 23/2 ರಲ್ಲಿ 2 ಎಕರೆ 15 ಗುಂಟೆ ಜಮೀನು ಇರುತ್ತದೆ. ಮೂಲತಃ ಸದರಿ ಸರ್ವೆ ನಂಃ 23/2 ರಲ್ಲಿ 6 ಎಕರೆ 30 ಗುಂಟೆ ಜಮೀನು ಇತ್ತು ಎಂದರೆ ಸಾಕ್ಷಿ ಇತ್ತು ಎಂದರೆ ಸಾಕ್ಷಿ ಅವರವರು ಹೇಗೆ ಬೇಕೋ ಹಾಗೆ ಮಾಡಿಕೊಂಡಿದ್ದಾರೆ ಫೋರ್ಜರಿ ಮಾಡಿ ಮಾಡಿಕೊಂಡಿದ್ದಾರೆ, ನನ್ನ ತಾತನ ಹೆಸರಿನಲ್ಲಿ ಸರ್ವೆ ನಂಃ 23 ರಲ್ಲಿ 9 ಎಕರೆ 36 ಗುಂಟೆ ಜಮೀನು ಇರುವುದು ಎಂದು ನುಡಿಯುತ್ತಾರೆ. ನೂರ್ ಜಾನ್ ಬೇಗಂ ಕೋಂ ಇಮಾಮ್ ಸಾಬ್ ಎಂದರೆ ನನ್ನ ಅತ್ತೆ ಮತ್ತು ಮಾವ. ಸಾಕ್ಷಿಗೆ ಒಂದು ಆರ್ ಟಿ ಸಿ ಯ ದೃಢೀಕೃತ ನಕಲನ್ನು ತೋರಿಸಿ ಅದರಲ್ಲಿ ಸರ್ವೆ ನಂಃ 23/2 ರಲ್ಲಿ 6 ಎಕರೆ 30 ಗುಂಟೆ ಜಮೀನು ನೂರ್ ಜಾನ್ ಬೇಗಂ ಕೋಂ ಇಮಾಮ್ ಸಾಬ್ ರವರ ಹೆಸರಿನಲ್ಲಿ ಇದೆ ಎಂದರೆ ಆ ದಾಖಲೆಯಲ್ಲಿ ಇದೆ ಆದರೆ ಆ ಜಮೀನು ನನ್ನ ತಾತನ ಜಮೀನು ಎನ್ನುತ್ತಾರೆ. ಸದರಿ ಆರ್ ಟಿ ಸಿ ಯನ್ನು ನಿಡಿ.2 ಎಂದು ಗುರುತಿಸಲಾಯಿತು. ಸದರಿ ದಾಖಲೆಯಲ್ಲಿ ಹೇಳಿಕೆಯ ಆಧಾರದ ಮೇಲೆ ಷೇಕ್ ದಾವೂದ್ ಸಾಬ್ ರವರಿಗೆ ನೂರ್ ಜಾನ್ ಬೇಗಂ ರವರು ಖಾತೆ ಬದಲಾವಣೆ

ಮಾಡಿದ್ದಾರೆ ಎಂದು ಇದೆ ಎಂದರೆ ಸರಿ. ಸಾಕ್ಷಿಗೆ ಒಂದು ಮ್ಯುಟೇಷನ್ ಆದೇಶದ ದೃಢೀಕೃತ ನಕಲನ್ನು ತೋರಿಸಿ ಅದರಲ್ಲಿ ಖಾತೆ ಬದಲಾವಣೆಗೆ ಸಂಬಂಧಿಸಿದ ಹಾಗೆ ಏನಾದರೂ ತಕರಾರು ಇದ್ದರೆ 30 ದಿನಗಳಲ್ಲಿ ಸಲ್ಲಿಸಬಹುದೆಂದು ಸಂಬಂಧಪಟ್ಟ ಗ್ರಾಮದ ಛಾವಡಿಯಲ್ಲಿ ಪ್ರಚಾರಪಡಿಸಿದ್ದು ಯಾವುದೇ ತಕರಾರು ಬಂದಿರುವುದಿಲ್ಲವೆಂದು ಖಾತೆದಾರರಾದ ನೂರ್ ಜಾನ್ ಬೇಗಂ ಮತ್ತು ಗಂಡ ಇಮಾಮ್ ಸಾಬ್, ಮಗ ರಿಜ್ವಾನ್ ರವರ ಹೇಳಿಕೆಯ ಮೇರೆಗೆ ಖಾತೆ ಬದಲಾವಣೆ ಮಾಡಲಾಗಿದೆ ಎಂದು ಬರೆದಿದೆ ಎಂದರೆ ಸಾಕ್ಷಿ ಆ ರೀತಿ ಬರೆದಿದೆ ನಮ್ಮ ಗಮನಕ್ಕೆ ಬಂದಿಲ್ಲ ಎನ್ನುತ್ತಾರೆ. ಸದರಿ ದಾಖಲೆಯನ್ನು ನಿಡಿ.3 ಎಂದು ಗುರುತಿಸಲಾಯಿತು.

8. ಸದರಿ ಸರ್ವೆ ನಂಃ 23/2 ರ ಜಮೀನಿನಲ್ಲಿ ನಿಮಗೆ ಹಕ್ಕು ಇದ್ದಿದ್ದರೆ ನೀವು ತಕರಾರು ಸಲ್ಲಿಸುತ್ತಿದ್ದೀರಿ ಎಂದರೆ ಸಾಕ್ಷಿ ಅದು ನಮ್ಮ ಗಮನಕ್ಕೆ ಬರಲಿಲ್ಲ ನಮಗೆ ಗೊತ್ತಾಗದೆ ಮಾಡಿಕೊಂಡಿರುವುದು ಎನ್ನುತ್ತಾರೆ. ಷೇಕ್ ದಾವೂದ್ ಸಾಬ್ ರವರಿಗೆ ಖಾತೆ ಆಗಿದೆ ಎಂದು ನಾವು ಈ ಕೇಸಿಗೆ ಬಂದ ಮೇಲೆ ಗೊತ್ತಾಗಿರುತ್ತದೆ. ನನಗೂ ಹಾಗೂ ನನ್ನ ತಂದೆಗೆ ಈ ಖಾತೆಯಾಗಿರುವ ವಿಷಯ ಮೊದಲೇ ಗೊತ್ತಿತ್ತು, ಗೊತ್ತಿದ್ದರೂ ಸಹ ನಮಗೆ ಯಾವುದೇ ಹಕ್ಕು ಇಲ್ಲದೇ ಇರುವ ಕಾರಣ ನಾವು ಸುಮ್ಮನೇ ಇದ್ದೆವು ಎಂದರೆ ಸರಿಯಲ್ಲ. ಸರ್ವೆ ನಂಃ 23/2 ರಲ್ಲಿ ಇದ್ದ ಒಟ್ಟು 6 ಎಕರೆ 30 ಗುಂಟೆ ಜಮೀನಿನಲ್ಲಿ 4 ಎಕರೆ 15 ಗುಂಟೆ ಜಮೀನನ್ನು ಷೇಕ್ ದಾವೂದ್ ಸಾಬ್ ರವರು ಅವರ ಮಕ್ಕಳ ಒಪ್ಪಿಗೆ ಮೇರೆಗೆ ತನ್ನ ಹೆಂಡತಿಯ ಹೆಸರಿಗೆ ಖಾತೆ ಮಾಡಿಸಿದ್ದಾರೆ ಎಂದು ಸಾಕ್ಷಿಗೆ ಒಂದು ಮ್ಯುಟೇಷನ್ ಆದೇಶದ ದೃಢೀಕೃತ ನಕಲನ್ನು ತೋರಿಸಲಾಗಿ ಸಾಕ್ಷಿ ಅದು ನಮ್ಮ ಗಮನಕ್ಕೆ ಬಂದಿಲ್ಲ, ನಮಗೆ ಗೊತ್ತಾಗದೆ ಮಾಡಿಕೊಂಡಿದ್ದಾರೆ ಎನ್ನುತ್ತಾರೆ. ಸದರಿ ದಾಖಲೆಯನ್ನು ನಿಡಿ.4 ಎಂದು ಗುರುತಿಸಲಾಯಿತು. ಇದು ಸಹ 1997 ರಲ್ಲಿಯೇ ನಮ್ಮ ಗಮನಕ್ಕೆ ಬಂದಿದೆ ಆದರೆ ಗಮನಕ್ಕೆ ಬಂದಿಲ್ಲವೆಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಉಳಿದ 2 ಎಕರೆ 15

ಗುಂಟೆ ಜಮೀನು ಷೇಕ್ ದಾವೂದ್ ಸಾಬ್ ರವರ ಹೆಸರಿನಲ್ಲಿಯೇ ಇದೆ ಎಂದು ಸಾಕ್ಷಿಗೆ ಒಂದು ಆರ್ ಟಿ ಸಿ ಯನ್ನು ತೋರಿಸಲಾಗಿ ಅದನ್ನು ನೋಡಿ ಒಪ್ಪಿದ್ದಾರೆ, ಸದರಿ ದಾಖಲೆಯನ್ನು ನಿಡಿ.5 ಎಂದು ಗುರುತಿಸಲಾಯಿತು.

(ನ್ಯಾಯಾಲಯದ ಕಾಲಾವಕಾಶ ಮುಗಿದಿದ್ದು, ಮುಂದುವರೆದ ಪಾಟೀಸವಾಲನ್ನು ಮುಂದೂಡಲಾಯಿತು).

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು).

ಓ.ಹೇ.ಕೇ.ಸ.ಇದೆ.

ಹೆಚ್ಚುವರಿ ಹಿರಿಯ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.
ಹುಣಸೂರು.